Experience has shown that people who are in e middle income group have misused this loan for construction of shops and other things. In these circumstances, I have come to the conclusion that the Housing Board should directly build houses. Even in towns, there is dearth for houses for even the Government servants, Munsiff Magistrates and other officials. In many towns. for want of houses, people do not go. Now-a-days, every panchayat has got Government official. In many places, the teachers cannot go, because they have no houses. So, the Housing Board has to confine its activities for the construction of houses either in the towns or even in Village Panchayats if necessary. Even in towns, there are some places where built houses are not disposed of at all, because they construct them without knowing whether the people are capable of buying them or not or without in advance, finding out parties who are likely to buy the houses. So, houses have not been disposed off. People have not come forward to buy them.

9.30 A. M.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ತಾವು ಮಾನ್ಯ ಆರ್ಥಿಗಂರವರು ಕೇಳಿದಂಥಾ ಪ್ರಶ್ನೆಗೆ ತಾವು ನಗದು ಹಣ ಸಾಲ ನೀಡುವ ಯೋಜನೆಯನ್ನು ಪುನಃ ತರಲು ಮನವಿಗಳು ಬಂದಿವೆ ಎಂದು ಹೇಳಿದ್ದೀರಿ. ಕ್ಯಾಷ್ ಲೋನ್ ಅನ್ನು ಲೋ ಇನ್‌ಕಂ ಗ್ರೂಪ್‌ಗೂ ಮತ್ತು ಮಿಡಲ್ ಇನ್‌ಕಂಗ್ರೂಪ್‌ಗೂ ಹೌಸಿಂಗ್ ಬೋರ್ಡ್‌ನವರು ಕೊಡುತ್ತಾ ಇದ್ದರು. ಈಗ ಇದರಲ್ಲಿ ಏನಾಗಿದೆ ಎಂದರೆ ಈ ಪೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್ ಕಾರ್ಪೊರೇಷನ್ಸ್ ಡಿಫಂಕ್ಟ್ ಆಗಿರುವುದರಿಂದ ಸಾಲ ಸಿಗಬೇಕಾದರೆ ಹೌಸಿಂಗ್ ಬೋರ್ಡ್‌ನಿಂದಲೇ ಸಿಗಬೇಕು. ಈ ಬಗ್ಗೆ ಇನ್ನೊಂದು ಸೊಸೈಟಿ ಇದೆ ಅದು ಯಾವುದೆಂದರೆ ಹೌಸಿಂಗ್ ಕಾರ್ಪೊರೇಷನ್ ಅಂತ ಇದೆ. ಆ ಸೊಸೈಟಿಯಲ್ಲಿ ಮೆಂಬರ್ ಆಗಿದ್ದವರಿಗೆ ಮಾತ್ರ ಅವರು ಸಾಲ ಕೊಡುತ್ತಾರೆ. ಆದಕ್ಕಾಗಿ ನಾನು ಹೇಳುವುದು ಏನೆಂದರೆ ಹಿಂದೆ ಈ ವರ್ಗಕ್ಕೆ ಸಾಲ ಕೊಡತಕ್ಕಂಥಾದ್ದರ ಬಗ್ಗೆ ಏನು ಒಂದು ಯೋಜನೆ ಇತ್ತೋ ಅದನ್ನು ಪುನಃ ಜಾರಿಗೆ ತರುವುದಕ್ಕೆ ತಾವು ಮತ್ತೆ ಇದನ್ನು ಪುನರ್‌ಪರಿಶೀಲನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಹಿಂದೆ ಅವರು ಅರ್ಧ ಸಾಲ ಕೊಟ್ಟುಬಿಟ್ಟಿದ್ದಾರೆ. ಅದು ಅತ್ತಲೂ ಇಲ್ಲ ಇತ್ತಲೂ ಇಲ್ಲ, ಅದು ತ್ರಿಶಂಕು ಸ್ವರ್ಗದಲ್ಲಿದೆ. ಇಂಥಾ ತ್ರಿಶಂಕು ಸ್ವರ್ಗದಲ್ಲಿರುವವರಿಗೆ ಏನಾದರೂ ಸಹಾಯ ಮಾಡಿ ಎಂದರೆ ಸಹಾಯ ಮಾಡಬಹುದು. ಹೊಸದಾಗಿ ಕೊಡುವುದಕ್ಕಂತೂ ಸಾಧ್ಯವಿಲ್ಲಾ. ಮತ್ತು ಇದು ಒಂದು ಉತ್ತಮವಾದ ನಿಯಮವು ಅಲ್ಲ.

Exhibiting Kannada Pictures

429 SRI S. M. SHEERNALY CHANDRASHEKAR, (Hosanagar).—Will the Minister of State for information and Youth Services be pleased to state.—

(a) was there any assurance from the Hon'ble Chief Minister that en order to the effect that every cinema theatre in Bangalore in particulars, and Karnataka in general should exhibit Kannada picture at least for some period in a year, when late Sri Nagendra Rao and others met him in a delegation,

(b) if so, whether it has been implemented strictly,

(c) whether the Government is aware that many theatres, Bangalore in Particular, Karnataka in general are not exhibiting Kannada movie even for a period of a month or fifteen daas in a year,

(d) if so, what action Government propose to take against such cinema theatres ?

SRI K. H. SRINIVAS (Minister of State for Information and Youth Services).—

(a) There was no such assurance.

(b) Does not arise in view of reply to (a) above.

(c) Yes, in a few cases.

(d) No action can be taken as there is no breach of any statutory rule or license condition. However, Government are taking other measures to enforce the exhibition of Kannada pictures by all theatres.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್. ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಅಂಥಾ ಭರವಸೆಯನ್ನೇನೂ ನೀಡಿಲ್ಲಾ ಎಂದು ಹೇಳಿದ್ದೀರಿ, ನಾನು ವಿಚಿತವಾಗಿ ಕೇಳುತ್ತಾ ಇದ್ದೇನೆ, ದಿವಂಗತ ಶ್ರೀ ನಾಗೇಂದ್ರರಾವ್‌ರ ಹಾಗೂ ಇತರರೂ ಸೇರಿಕೊಂಡು ಏನಾದರೂ ಒಂದು ನಿಯೋಗ ಮುಖ್ಯಮಂತ್ರಿಗಳ ಹತ್ತಿರ ಬಂದಿದ್ದರೇ?

† ಶ್ರೀ ಕೆ. ಹೆಚ್. ಶ್ರೀನಿವಾಸ್.—ದಿವಂಗತ ಶ್ರೀ ನಾಗೇಂದ್ರರಾವ್ ಮತ್ತು ಇತರರು ಸೇರಿ ಕೊಂಡು ಮಾನ್ಯಮಂತ್ರಿಗಳ ಹತ್ತಿರ ಒಂದು ನಿಯೋಗ ಬಂದು ಮನವಿಗಳನ್ನು ಕೊಟ್ಟಿದ್ದಕ್ಕೆ ಇಲ್ಲಿ ಯಾವ ದಾಖಲೆಯೂ ಇಲ್ಲಾ. ಆದರೆ ಕನ್ನಡ ಚಲನಚಿತ್ರ ಪ್ರೇಮಿಗಳ ಒಂದು ಸಂಘ ಮುಖ್ಯಮಂತ್ರಿಗಳ ಹತ್ತಿರ ಬಂದು ಅವರು ಮನವಿಗಳನ್ನು ಕೊಟ್ಟದ್ದು ಉಂಟು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ವಿಚಿತವಾಗಿ ನನಗೆ ಗೊತ್ತಿರುವುದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಾ ಇದ್ದೇನೆ. ಕನ್ನಡ ಚಿತ್ರಗಳಲ್ಲಿ ನಟನೆ ಮಾಡತಕ್ಕಂಥಾವರು ನನ್ನ ಹತ್ತಿರ ಬಂದು ಹೇಳಿದರು ಏನೆಂದರೆ ದಿವಂಗತ ನಾಗೇಂದ್ರರಾವ್ ಹಾಗೂ ಇತರರ ನಿಯೋಗವೊಂದು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಭೇಟಿ ಇತ್ತಿದ್ದಾಗ ಈ ರೀತಿಯಾದ ಒಂದು ಆಶ್ವಾಸನೆ ಕೊಟ್ಟಿದ್ದರು ಆದರೆ ಅದು ಇಲ್ಲಿಯವರೆಗೂ ಕೂಡ ಜಾರಿಯಾಗಲಿಲ್ಲಾ ಎಂದು ಹೇಳಿದರು. ಆದುದರಿಂದ ಸ್ವಾಮಿ, ತಾವು ಇದನ್ನು ವೆರಿಫೈ ಮಾಡುತ್ತೀರಾ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ವೆರಿಫೈ ಮಾಡಿ ಈ ಬಗ್ಗೆ ಏನು ದಾಖಲೆಗಳು ಇವೆ ಅವನ್ನು ನೋಡಿಯೇನೇ ಉತ್ತರ ಆಚ್ಚು ಹಾಕಿಸಿರುವುದು,

ಶ್ರೀ ಮಂಳ್ಳೂರು ಆನಂದರಾವ್,—ಸ್ವಾಮಿ. ಕನ್ನಡ ಚಲನಚಿತ್ರಗಳು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಾ ಇವೆ. ಸದ್ಯಕ್ಕೆ ಥಿಯೇಟರ್‌ಗಳಿಲ್ಲ ಸಿಕ್ಕುತ್ತಾ ಇಲ್ಲಾ. ಕರ್ನಾಟಕ ರಾಜ್ಯದಲ್ಲಿರುವ ಚಲನ ಚಿತ್ರಮಂದಿರಗಳಲ್ಲಿ ಹಿಂದಿ ತಮಿಳು, ತೆಲಗು ಇವುಗಳಿಗೆ ಥಿಯೇಟರ್ ಸಿಕ್ಕುತ್ತಾ ಇದೆ. ಆದಕ್ಕೋಸ್ಕರ ವಾಗಿ ಶಾಸನಬದ್ದವಾದ ಒಂದು ಕಾರ್ಯಕ್ರಮ ಹಾಕಿಕೊಂಡು ಕನ್ನಡ ಚಿತ್ರಗಳು ಇಷ್ಟು ದಿನ ನಡೆಯಲೇ ಬೇಕು ಅಂತ ಮಾಡುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆಯೇನು ಸ್ವಾಮಿ ?

ಶ್ರೀ ಕೆ ಹೆಚ್ ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಕನ್ನಡ ಚಲನಚಿತ್ರಗಳ ಪ್ರದರ್ಶನಕ್ಕೆ ಸಾಕಷ್ಟು ಅವಕಾಶ ಇರಬೇಕು ಎನ್ನುವುದರ ಬಗ್ಗೆ ಯಾವ ಭಿನ್ನಾಭಿಪ್ರಾಯವು ಇಲ್ಲಾ. ಮಾನ್ಯ ಸದಸ್ಯರಿಗೆ ಈ ವಿಷಯದಲ್ಲಿ ಎಷ್ಟರಮಟ್ಟಿಗೆ ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ

ಹಾಗೂ ಈ ಪ್ರಶ್ನೆ ಅನೇಕ ವರ್ಷಗಳಿಂದಲೂ ಪರಿಶೀಲನೆಯಲ್ಲಿದೆ. ಒಮ್ಮೆ ಈ ಒಂದು ಕಾನೂನಿಗೆ ಸೂಕ್ತವಾದ ತಿದ್ದುಪಡಿ ಮಾಡುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಪರಿಶೀಲನೆ ಮಾಡಿ ತಿಳಿದುಕೊಳ್ಳುವುದಕ್ಕೆ ಇದು ಭಾರತದ ಅಟಾರ್ನಿ ಜನರಲ್‌ರವರ ಅಭಿಪ್ರಾಯಕ್ಕೂ ಹೋಗಿತ್ತು. ಅವರು ಇದನ್ನು ಮಾಡಿದರೆ ರಾಜ್ಯಾಂಗದ ವಿರುದ್ಧವಾಗಿ ಆಗುತ್ತದೆ ಅಲ್ಲದೆ ಇದು ತಾರತಮ್ಯ ತೋರಿಸಿದಂತಾಗುತ್ತದೆ ಎಂದು ಹೇಳಿದರು. ಈ ಒಂದು ಹಿನ್ನೆಲೆಯಲ್ಲಿ ಇದು ಮುಸುಕು ಬಿತ್ತು. ಇದು ಕೆಲವು ಕಾಲ ಹಾಗೆಯೇ ಉಳಿಯಿತು. ನಂತರ ಕೆಲವು ದಿವಸದಿಂದ ಈಚೆಗೆ ನಾನು ಪ್ರಯತ್ನ ಮಾಡಿದೆ. ಈ ಒಂದು ಹಿನ್ನೆಲೆಯಲ್ಲಿ ಫಿಲಂ ಛೇಂಬರ್ಸ್‌ರವರೇ ಸ್ವಂತಃ ಒಂದು ನಿಯಮಾವಳಿಯನ್ನು ಹಾಕಿಕೊಳ್ಳುತ್ತಾರೆ, ಮತ್ತು ಒಂದು ವರ್ಷದಲ್ಲಿ ಕನಿಷ್ಟಪಕ್ಷ ೮ ವಾರಗಳ ಕಾಲವಾದರೂ ಕೂಡ ಕನ್ನಡ ಚಲನಚಿತ್ರಗಳು ಪ್ರದರ್ಶಿತವಾಗಲೇ ಬೇಕು ಅಂತ ಮಾಡಿದ್ದಾರೆ. ಈ ಬಗ್ಗೆ ಒಂದು ಟ್ರೈಯಲ್ ಕೂಡ ಆಗಿದೆ. ಈ ಕಾರ್ಯ ಸಮರ್ಪಕವಾಗಿ ಆಗುತ್ತದೆ ಎನ್ನುವುದು ಸರ್ಕಾರಕ್ಕೆ ಬಂದಿರತಕ್ಕಂಥಾ ವರದಿಗಳಿಂದ ಸ್ಪಷ್ಟವಾಗಿದೆ. ಆದರೆ ಈ ಕನ್ನಡ ಚಲನಚಿತ್ರಗಳನ್ನು ಪ್ರದರ್ಶನ ಮಾಡಲು ಥಿಯೇಟರ್‌ಗಳನ್ನು ಒದಗಿಸತಕ್ಕಂಥಾದ್ದು ಸರ್ಕಾರದ ಒಂದು ಕರ್ತವ್ಯವು ಆಗಿರಂತ್ತದೆ. ಈ ಬಗ್ಗೆ ಕಾನೂಸನ್ನು ಹೇಗೆ ತಿದ್ದುಪಡಿ ಮಾಡಬೇಕು ಅನ್ನುವ ಆಲೋಚನೆಯೂ ಇದೆ. ಅಲ್ಲದೆ ಈಗ ಇರತಕ್ಕಂಥಾ ಒಂದು ಹಿನ್ನೆಲೆಯಲ್ಲಿ ಇದಕ್ಕೆ ಕಾನೂನು ಬೇಕಾಗಿಲ್ಲಾ, ಇದರ ಒಂದು ಲೈಸನ್ಸ್‌ಗೇನೇ ಇರತಕ್ಕಂಥಾ ನಿಯಮಾವಳಿಗೇನೇ ಒಂದು ತಿದ್ದುಪಡಿ ಮಾಡಿದರೆ ಒಳ್ಳೆಯದು ಎಂದು ತಿಳಿದು ಬಂದಿದೆ. ಈ ದೃಷ್ಟಿಯಿಂದ ಈ ಬಗ್ಗೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ನಮ್ಮ ಲೈಸನ್‌ನಲ್ಲೆ ಒಂದು ತಿದ್ದುಪಡಿ ಮಾಡಿ ಈ ಕನ್ನಡ ಚಲನಚಿತ್ರಗಳನ್ನು ಪ್ರತಿ ಥಿಯೇಟರ್‌ನಲ್ಲೂ ವರ್ಷದಲ್ಲಿ ೧೨ ವಾರಗಳ ಕಾಲವಾದರೂ ಪ್ರದರ್ಶನ ಮಾಡಬೇಕು ಅನ್ನುವ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಸ್. ಎಂ. ತೀರನಾಳ ಚಂದ್ರಶೇಖರ್ —ಸ್ವಾಮಿ, ಕೆಂಪೇಗೌಡರ ರೋಡಿನಲ್ಲಿ ಒಂದು ಥಿಯೇಟರ್‌ನಲ್ಲಿ ಒಂದು ಕನ್ನಡ ಚಲನ ಚಿತ್ರ ಹಾಕಿಬಿಟ್ಟರೆ ಇನ್ನೊಂದು ಕನ್ನಡ ಚಲನಚಿತ್ರ ಹಾಕಬೇಕಾದರೆ ತಿಂಗಳುಗಟ್ಟಲೆ ಕಾಯಬೇಕು. ನಮ್ಮ ಕರ್ನಾಟಕ ರಾಜ್ಯ ಉದಯವಾಗಿ ೨೬ ವರ್ಷಗಳಾದರೂ ಕೂಡ ಈ ಬಗ್ಗೆ ಇನ್ನೂ ಸುಧಾರಣೆಯಾಗಿಲ್ಲಾ. ಈ ಬಗ್ಗೆ ತೀವ್ರವಾದ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ತಾವೇನು ನಿರ್ಧಾರ ಮಾಡಿದ್ದೀರಾ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಬಗ್ಗೆ ಲೈಸನ್ಸ್‌ನ ಒಂದು ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಿ ಪ್ರತಿಯೊಂದು ಚಲನಚಿತ್ರ ಮಂದಿರಗಳಲ್ಲೂ, ಕೆಂಪೇಗೌಡರ ರೋಡಿನಲ್ಲಿರುವ ಚಲನ ಚಿತ್ರ ಮಂದಿರವು ಸೇರಿದಂತೆ ವರ್ಷಕ್ಕೆ ೧೨ ವಾರಗಳ ಕಾಲವಾದರೂ ಕನಿಷ್ಟಪಕ್ಷ ಅವರು ಪ್ರದರ್ಶನ ಮಾಡಬೇಕು ಅಂತ ಮಾಡುತ್ತೇವೆ ಇಲ್ಲದೇ ಹೋದರೆ ಅವರ ಲೈಸನ್ಸ್ ಊರ್ಜಿತವಾಗುವುದಿಲ್ಲ ಎನ್ನುವ ಒಂದು ತೀರ್ಮಾನವನ್ನೂ ಸಹ ತೆಗೆದುಕೊಂಡಿದ್ದೇವೆ.

Takihg Over Private High Schoo ls under Government Control

434 SRI S. H. S. BHAKSHI (Bijapur).—Will the Minister for Education be pleased to state.—

(a) whether Government have any proposal before them to take -over all Private High School under Government control,

(b) if so, whether Government would give benefit of service conditions to the teacher and employees of such High Schools on par with the Government. Servants after take-over, in respect, service, promotion, pay scales, seniority, pensionary benefits etc,

(c whether Government. intend to treat all the teachers and staff of such private schools on par with Government till the take -over is compiete ?